# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

## ಹಸ್ತಪ್ರತಿಶಾಸ್ತ್ರ ವಿಭಾಗ

# ಅಮೃತಾ ಪ್ರೀತಮ್ ಅವರ ನೆನಪುಗಳು

**ವಿಶೇಷ ಉಪನ್ಯಾಸ ಕಾರ್ಯಕ್ರಮ – 07.03.2025**

## ನಡೆದಾಡುವ ತಾಜ್ ಮಹಲ್ ಅಮೃತ ಪ್ರೀತಮ್ : ರೇಣುಕಾ ನಿಡುಗುಂದಿ ಅಭಿಮತ

ಇವತ್ತಿಗೂ ಭಾರತ ಮತ್ತು ಪಾಕಿಸ್ತಾನದ ಜನರು ಪ್ರೀತಿ ಮಾಡುವ ಕವಿಯತ್ರಿ ಪಂಜಾಬಿನ ಪ್ರಖ್ಯಾತ ಅಮೃತ ಪ್ರೀತಮ್. ಇವರು ದೆಹಲಿಯಲ್ಲಿ ವಾಸವಾಗಿದ್ದಾಗ ಜನರು ಇವರ ಹುಡುಗೆ ತೊಡಗಿಯನ್ನು ನೋಡಿ ನಡೆದಾಡುವ ತಾಜ್ ಮಹಲ್ ಎಂದು ಕರೆಯುತ್ತಿದ್ದರು ಎಂದು ನವದೆಹಲಿಯ ಸಾಹಿತಿಗಳಾದ **ರೇಣುಕಾ ನಿಡುಗುಂದಿ** ಅವರು ನುಡಿದರು.



ಅಮೃತಾ ಪ್ರೀತಮ್ ಅವರ ನೆನಪುಗಳು ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ನವದೆಹಲಿಯ ಸಾಹಿತಿಗಳಾದ ರೇಣುಕಾ ನಿಡುಗುಂದಿ ಅವರು ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗ**ದಿಂದ 7ನೇ ಮಾರ್ಚ್ 2025ರಂದು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಆಯೋಜಿಸಿದ್ದ **ಅಮೃತಾ ಪ್ರೀತಮ್ ಅವರ ನೆನಪುಗಳು** ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಾ, ಅಮೃತ ಪ್ರೀತಮ್ ಅವರು ತಮ್ಮ ವೈಯಕ್ತಿಕ ಜೀವನಕ್ಕೆ ಆಸ್ಪದ ಕೊಡದೆ, ಸಮಾಜದ ಒಳತಿಗೆ ತಮ್ಮ ಬರಹಗಳ ಮೂಲಕ ಹೋರಾಡಿದವರು. ಇವರು ಹಿಂದೂ ಮುಸ್ಲಿಂ ಎಂಬ ಜಾತ್ಯಾತೀತ ತೊರೆದು ಎಲ್ಲರೂ ಒಂದೇ ಎಂಬ ಭಾವವನ್ನು ವ್ಯಕ್ತಪಡಿಸುತ್ತಿದ್ದರು. ಭಾರತ ಮತ್ತು ಪಾಕಿಸ್ತಾನದ ವಿಭಜನೆ ಸಮಯದಲ್ಲಿ ಅವರು ಭಾರತ–ಪಾಕಿಸ್ತಾನಗಳೆರಡರ ಗಡಿಗಳ ಬಗ್ಗೆ ಸಮಾನ ಒಲವು ಹೊಂದಿದ್ದರು. ಇವರ ಬರಹಗಳು ಕೇವಲ ಒಂದು ರಾಷ್ಟ್ರಕ್ಕೆ ಸೀಮಿತವಾಗಿದೆ, ಏಷ್ಯಾ ಖಂಡಕ್ಕೆ ಪ್ರಭಾವಿತಗೊಂಡಿವೆ ಎಂದರು. ಅಮೃತ ಪ್ರೀತಮ್ ಮತ್ತು ನಾನು ತುಂಬಾ ಆತ್ಮೀಯರು ಆದ್ದರಿಂದ ಅವರು ನೆನಪುಗಳು ನನ್ನನ್ನು ಸದಾ ಕಾಡುತ್ತವೆ. ಇಂದಿನ ಕಾಲದಲ್ಲಿ ಅವರನ್ನು ನಡೆದಾಡುವ ವಿಶ್ವಕೋಶ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.




ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮುಖ್ಯಸ್ಥರಾದ ಡಾ. ವೆಂಕಟಗಿರಿ ದಳವಾಯಿ ಅವರು ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮುಖ್ಯಸ್ಥರಾದ **ಡಾ. ವೆಂಕಟಗಿರಿ ದಳವಾಯಿ** ಅವರು ಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡುತ್ತಾ, ಅಮೃತ ಪ್ರೀತಮ್ ಅವರ ಲೇಖನಗಳು ಒಂದು ಮತಕ್ಕೆ ಸೀಮಿತವಾಗಿದೆ, ಎಲ್ಲಾ ಧರ್ಮಕ್ಕೂ ಅನ್ವಯಿಸುತ್ತದೆ. ಇವರ ಬರಹಗಳ ಸಂವೇದನೆ ಸಾಮಾನ್ಯ ಕೂಲಿ ಕಾರ್ಮಿಕರ ಜೀವನದ ನಾಡಿ ಮಿಡಿತ ಎಂದು ಹೇಳಿದರು.




ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ವೀರೇಶ ಬಡಿಗೇರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ **ಡಾ. ವೀರೇಶ ಬಡಿಗೇರ** ಅವರು ರೇಣುಕಾ ನಿಡಗುಂದಿ ಅವರ ಅನುವಾದ ಸಂತಾಲಿಗಳ ಯಾವ ವಿಳಾಸವೂ ಅವಳದಲ್ಲ, ಕವನಗಳನ್ನು ಎಲ್ಲ ವಿದ್ಯಾರ್ಥಿಗಳು ಓದಲೇಬೇಕು ಎಂದು ಅಭಿಪ್ರಾಯಪಟ್ಟರು.

ರೇಣುಕಾ ನಿಡಗುಂದಿ ಅವರನ್ನು ಗೌರವಿಸಲಾಯಿತು. ವಿಶೇಷ ಉಪನ್ಯಾಸದಲ್ಲಿ ಪ್ರೊ. ಸಿ.ವೆಂಕಟೇಶ, ಉಪನಿರ್ದೇಶಕಿ ಡಾ.ಡಿ.ಮೀನಾಕ್ಷಿ, ಸಿಸ್ಟಂ ಅನಾಲಿಸ್ಟ್ ಶ್ರೀಮತಿ ಶಕುಂತಲಾ ಚೌಡಾನಾಯ್ಕ, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಆಡಳಿತ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಎಂ.ಗೋವಿಂದ ವಂದಿಸಿದರು. ರೂಪಾ ನಿರೂಪಿಸಿದರು, ಮಂಜುನಾಥ ಕರಲಿಂಗಣ್ಣ ಪ್ರಾರ್ಥನೆ ಮಾಡಿದರು.









ಭಾನುವಾರ, 9, ಮಾರ್ಚ್, 2025
ಹುಬ್ಬಳ್ಳಿ | HUBBALLI

ಮಾಹಿತಿ ಕೇಂದ್ರ

ಸಂಯುಕ್ತ ಕರ್ನಾಟಕ

# ನಡೆದಾಡುವ ತಾಜ್ ಮಹಲ್ 'ಅಮೃತ ಪ್ರೀತಮ್'

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದ ವತಿಯಿಂದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಆಯೋಜಿಸಿದ್ದ ಅಮೃತಾ ಪ್ರೀತಮ್ ಅವರ ನೆನಪುಗಳು ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ನವದೆಹಲಿಯ ಸಾಹಿತಿ ರೇಣುಕಾ ನಿಡುಗುಂದಿ ಮಾತನಾಡಿದರು.

**ಹೊಸಪೇಟೆ:** ಇವತ್ತಿಗೂ ಭಾರತ ಮತ್ತು ಪಾಕಿಸ್ತಾನದ ಜನರು ಪ್ರೀತಿ ಮಾಡುವ ಕವಿಯತ್ರಿ ಎಂದರೆ ಪಂಜಾಬಿನ ಪ್ರಖ್ಯಾತ ಅಮೃತ ಪ್ರೀತಮ್. ಇವರು ದೆಹಲಿಯಲ್ಲಿ ವಾಸವಾಗಿದ್ದಾಗ ಜನರು ಇವರ ಉಡುಗೆ ತೊಡಗೆಯನ್ನು ನೋಡಿ ನಡೆದಾಡುವ ತಾಜ್ ಮಹಲ್ ಎಂದು ಕರೆಯುತ್ತಿದ್ದರು ಎಂದು ನವದೆಹಲಿಯ ಸಾಹಿತಿ ರೇಣುಕಾ ನಿಡುಗುಂದಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದ ವತಿಯಿಂದ ಶುಕ್ರವಾರ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಆಯೋಜಿಸಿದ್ದ ಅಮೃತ ಪ್ರೀತಮ್ ಅವರ ನೆನಪುಗಳು ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಮೃತ ಪ್ರೀತಮ್ ಮತ್ತು ನಾನು ತುಂಬಾ ಆತ್ಮೀಯರು ಆದ್ದರಿಂದ ಅವರು ನೆನಪುಗಳು ನನ್ನನ್ನು ಸದಾ ಕಾಡುತ್ತವೆ. ಇಂದಿನ ಕಾಲದಲ್ಲಿ ಅವರನ್ನು ನಡೆದಾಡುವ ವಿಶ್ವಕೋಶ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮುಖ್ಯಸ್ಥ ಡಾ. ವೆಂಕಟಗಿರಿ ದಳವಾಯಿ ಪ್ರಾಸ್ತಾವಿಕ ಮಾತನಾಡಿ, ಅಮೃತ ಪ್ರೀತಮ್ ಅವರ ಲೇಖನಗಳು ಒಂದು ಮತಕ್ಕೆ ಸೀಮಿತವಾಗಿರದೆ, ಎಲ್ಲಾ ಧರ್ಮಕ್ಕೂ ಅನ್ವಯಿಸುತ್ತವೆ. ಇವರ ಬರಹಗಳ ಸಂವೇದನೆ ಸಾಮಾನ್ಯ ಕೂಲಿ ಕಾರ್ಮಿಕರ ಜೀವನದ ನಾಡಿಮಿಡಿತ ಎಂದರು.

ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವೀರೇಶ ಬಡಿಗೇರ ಮಾತನಾಡಿ, ರೇಣುಕಾ ನಿಡಗುಂದಿ ಅವರ ಅನುವಾದ ಸಂತಾಲಿಗಳ ಯಾವ ವಿಳಾಸವೂ ಅವಳದಲ್ಲ, ಕವನಗಳನ್ನು ಎಲ್ಲ ವಿದ್ಯಾರ್ಥಿಗಳು ಓದಲೇಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪ್ರೊ. ಸಿ.ವೆಂಕಟೇಶ, ಡಾ. ಡಿ. ಮೀನಾಕ್ಷಿ, ಶಕುಂತಲಾ ಚೌಡಾನಾಯ್ಕ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಆಡಳಿತ ಸಿಬ್ಬಂದಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪ ಡಾ. ಎಂ. ಗೋವಿಂದ, ರೂಪಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.